ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 1817/2021

.......................................................................

CW 01
PW 01

| | | |
|---|---|---|
| ಹೆಸರು | : | ಶಿವಾನಂದ ನಾವದಗಿ |
| ತಂದೆಯ ಹೆಸರು | : | ಕಲ್ಲಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಪಿ ಎಸ್ ಐ, ದಾಂಡೇಲಿ ಗ್ರಾಮೀಣ ಪೊಲೀಸ ಠಾಣೆ. |
| ವಾಸಸ್ಥಳ | : | ದಾಂಡೇಲಿ . |

ದಿನಾಂಕ 02-09-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ದಿನಾಂಕ 23-04-2021 ರಿಂದ ದಿನಾಂಕ 17-06-2022 ರ ವರೆಗೆ ಹಳಿಯಾಳ ಪೊಲೀಸ ಠಾಣೆಯಲ್ಲಿ ಪಿ ಎಸ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 13-09-2021 ರಂದು ನಾನು ಮನೆಯಲ್ಲಿ ಇದ್ದಾಗ ಮುರ್ಕವಾಡದ ಬೀಟ್ ಸಿಬ್ಬಂದಿಯಾದ ಚಾಸಾ 9 ರವರು ಫೋನ್ ಮಾಡಿ ಅವರಿಗೆ ಬಂದಂತಹ ಭಾತ್ಮಿ ಮಾಹಿತಿಯನ್ನು ನನಗೆ ತಿಳಿಸಿದನು. ಅದರಂತೆ ನಾನು ಕೂಡಲೇ ಠಾಣೆಗೆ ಬಂದು, ಭಾತ್ಮಿ ವಿಷಯವನ್ನು ಮೇಲಾಧಿಕಾರಿಯಾದ ಡಿ ವಾಯ್ ಎಸ್ ಪಿ ರವರಿಗೆ ಇ ಮೇಲ್ ಮೂಲಕ ಶೋಧನಾ ವಾರಂಟ್ ಅನ್ನು ಇ ಮೇಲ್ ಮೂಲಕ ಪಡೆದುಕೊಂಡು ಠಾಣಾ ಸಿಬ್ಬಂದಿಗಳಾದ ಚಾಸಾ 4 ರಿಂದ 8 ರವರಿಗೆ ಭಾತ್ಮಿ ವಿಷಯವನ್ನು ತಿಳಿಸಿ ಅವರನ್ನು ಕರೆದುಕೊಂಡು ಠಾಣಾ ಸಲಕರಣೆಗಳೊಂದಿಗೆ ಘಟನಾ ಜಾಗಕ್ಕೆ ಜೇಪ್ ಮುಖಾಂತರ ಮುರ್ಕವಾಡ ಬಸ್ ನಿಲ್ದಾಣದ ಹತ್ತಿರ 11-55 ಕ್ಕೆ ತಲುಪಿದೆವು. ಚಾಸಾ 9 ರವರಿಗೆ ಇಬ್ಬರು ಪಂಚರನ್ನು ಘಟನಾ ಜಾಗಕ್ಕೆ ಕರೆತರಲು ತಿಳಿಸಿದ್ದೇನು, ಅವರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಬಂದರು ಅವರಿಗೆ ಭಾತ್ಮಿ ವಿಷಯವನ್ನು ತಿಳಿಸಿ ಪಂಚರಾಗಲು ಕೋರಿಕೊಂಡು ಅವರ ಒಪ್ಪಿಗೆ

ಮೇರೆಗೆ ಜೀಪ್ ಅನ್ನು ಮರೆಯಲ್ಲಿ ನಿಲ್ಲಿಸಿ ಅಲ್ಲಿದ್ದ ಪಂಚರ ಸಮಕ್ಷಮ ಇಕೋ ಕ್ಲಬ್ ಮುರ್ಕವಾಡ ಹತ್ತಿರ ಹೋಗಿ ಬಾಗಿಲು ಮುಖಾಂತರ ನೋಡಿದಾಗ ಎರಡನೇ ಕೋಣೆಯಲ್ಲಿ ಜನ ಸುತ್ತುವರೆದಿದ್ದು, ಒಬ್ಬ ಅಂದರ್ ಮತ್ತು ಬಾಹರ ಎಂದು ಹೇಳುತ್ತಿರುವುದನ್ನು ಕೇಳಿ ಖಚಿತ ಪಡಿಸಿಕೊಂಡು, ಪಂಚರ ಸಮಕ್ಷಮ ಅವರನ್ನು ಸುತ್ತುವರೆದು ಶೋಧನಾ ವಾರಂಟ್ ಅನ್ನು ತೋರಿಸಿ ಏನು ಮಾಡುತ್ತಿರುವೀರಿ ಎಂದು ಕೇಳಿದಾಗ ಅವರು ಇಲ್ಲಿ ಅಂದರ್ ಬಾಹರ್ ಆಟ ಆಡುತ್ತಿದ್ದೇವೆ, ಆರೋಪಿ 1 ರವರು ಆಡಲು ಅನುಮತಿ ನೀಡಿದ್ದಾರೆ ಎಂದು ತಿಳಿಸಿದರು. ಇಸ್ಪೀಟ್ ಎಲೆ ಹಾಕುತ್ತಿದ್ದ ವ್ಯಕ್ತಿ ಆರೋಪಿ 2 ರವರ ಅಂಗ ಶೋಧನೆ ಮಾಡಲಾಗಿ ಆತನ ಎಡಗೈಯಲ್ಲಿ 10 ಇಸ್ಪೀಟ್ ಎಲೆಗಳು ಮತ್ತು ಪ್ಯಾಂಟ್ ಬಲಬದಿ ಜೇಬಿನಲ್ಲಿ ರೂ. 8500/- ಹಣ ಸಿಕ್ಕವು. ಅವರನ್ನು ಒಬ್ಬರಂತೆ ವಿಚಾರಿಸಲಾಗಿ ಅವರು ತಮ್ಮ ತಮ್ಮ ಹೆಸರುಗಳನ್ನು ಹೇಳಿದರು. ವಿನಾಯಕನ ಹತ್ತಿರ ರೂ. 1200, ವೆಂಕಟೇಶನ ಹತ್ತಿರ ರೂ. 1100, ಮಾಹದೇವನ ಹತ್ತಿರ ರೂ. 1300/-, ಶ್ರೀಕಾಂತನ ಹತ್ತಿರ ರೂ. 1500/-, ಅಶೋಕನ ಹತ್ತಿರ ರೂ. 1650/-, ಬಸವರಾಜನ ಹತ್ತಿರ ರೂ. 1180/-, ಗಾಂಧಿ ಮತ್ತು ನಾರಾಯಣ ರವರ ಹತ್ತಿರ ತಲಾ ರೂ. 1250/- ಮತ್ತು 1450/-, ಫೀಶಪ್ಪನ ಹತ್ತಿರ ರೂ. 2200/-, ಅಲ್ತಾಫ್ ಹತ್ತಿರ ರೂ. 2300/-, ಸಾಗರ ಹತ್ತಿರ ರೂ. 1320/-, ಹೀಗೆ ಒಟ್ಟು ರೂ. 28,640 ಹಾಗೂ ಮಂಡದ ಮೇಲೆ ರೂ. 3650 ಹಾಗೂ 42 ಎಲೆಗಳು ಸಿಕ್ಕವು. ಅವುಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು ಪಂಚನಾಮೆಯನ್ನು ರಾತ್ರಿ 12-15 ರಿಂದ 02-15 ರ ವರೆಗೆ ಜರುಗಿಸಿದೆವು. ಛಾಪೆ, 52 ಎಲೆಗಳು ಮತ್ತು ಹಣವನ್ನು ಜಪ್ತುಪಡಿಸಿಕೊಂಡು ಚಕ್ಕ ಬಂದಿ ತಯಾರಿಸಿದೆವು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಂಚನಾಮೆಯನ್ನು ಗುರುತಿಸಿದ ಮೇರೆಗೆ **ನಿಪಿ 1 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 1 ಎ ಎಂದು** ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ವಸ್ತುಗಳು ಮತ್ತು ಆರೋಪಿತರನ್ನು ಠಾಣೆಗೆ ವಶಕ್ಕೆ ಪಡೆದು ಠಾಣೆಗೆ ಬಂದು ಸರ್ಕಾರದ ಪರವಾಗಿ ದೂರು ನೀಡಿದೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ಗುರುತಿಸಿದ ಮೇರೆಗೆ **ನಿಪಿ 2 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 2 ಎ** ಗುರುತಿಸಲಾಯಿತು.

ಜಾಗದಲ್ಲಿದ್ದ 12 ಜನರನ್ನು ನೋಡಿದರೆ ಗುರುತಿಸುತ್ತೇನೆ. ಅವರಲ್ಲಿ ಕೆಲವರು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ.

ಜಪ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗ ನ್ಯಾಯಾಲಯದ ಮುಂದೆ ಇರುತ್ತವೆ. ಸಾಕ್ಷಿ ಗುರುತಿಸಿದ ಮೇರೆಗೆ 52 ಎಲೆಗಳನ್ನು ಒಟ್ಟಾರೆಯಾಗಿ **ಮು.ಮಾ. 1 ಎಂದು,** ಒಟ್ಟು ರೂ. 28,640 ನಗದು ಹಣವನ್ನು **ಮು.ಮಾ. 2 ಎಂದು,** ಒಂದು ಪ್ಲಾಸ್ಟಿಕ್ ಛಾಪೆಯನ್ನು **ಮು.ಮಾ. 3 ಎಂದು ಗುರುತಿಸಲಾಯಿತು.**

ಶೋಧನಾ ವಾರಂಟ್ ಅನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವಾರಂಟ್ ಅನ್ನು ಗುರುತಿಸಿದ ಮೇರೆಗೆ **ನಿಪಿ 3 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಆರ್ ಎ ಟಿ ವಕೀಲರಿಂದ.

ನನಗೆ ಮಾಹಿತಿ ಬಂದ ನಂತರ ಠಾಣೆಗೆ ಹೋದಾಗ ಚಾಸಾ 11 ರವರು ಠಾಣಾಧಿಕಾರಿಯಾಗಿ ಇದ್ದರು. ಪಂಚನಾಮೆಗೆ ಸ್ಥಳೀಯ ಪಂಚರನ್ನು ತೆಗೆದುಕೊಂಡಿದ್ದೇವು. ನಾವು ದಾಳಿ ಮಾಡಲು ಹೋದಾಗ ಕ್ಲಬ್ ನ ಬಾಗಿಲು ತೆರೆದಿತ್ತು. ದಾಳಿ ಮಾಡುವ ಕಾಲಕ್ಕೆ ಇವರೆ ಮಾಲೀಕರು ಇವರೇ ಕೆಲಸಗಾರರು ಎಂದು ಹೇಗೆ ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ 2 ನೇ ಆರೋಪಿತನಿಂದ ತಿಳಿದುಕೊಂಡೆವು. ಆರೋಪಿಗಳನ್ನು ಗುರುತಿಸುತ್ತೇನೆ. ಪೊರಟೇಬಲ್ ಪ್ರಿಂಟರ್ ಮಷಿನ್ ಅನ್ನು ಜೀಪ್ ನ ಬ್ಯಾಟರಿಗೆ ಜೋಡಿಸಿ ಪಂಚನಾಮೆಯ ಪ್ರಿಂಟ್ ಅನ್ನು ಜಾಗದಲ್ಲಿಯೇ ತೆಗೆದೆವು. ದಾಳಿ ಮಾಡುವ ಪೂರ್ವದಲ್ಲಿ ಮಾನ್ಯ ನ್ಯಾಯಾಲಯದ ಅನುಮತಿ ಪಡೆದಿದ್ದೀರಾ ಎಂದರೆ ಸಾಕ್ಷಿ ಆರೋಪಿತರು ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದಿದ್ದರಿಂದ ಮೇಲಾಧಿಕಾರಿಗಳ ಅನುಮತಿ ಕೂಡಲೇ ದಾಳಿ ಮಾಡಿದ್ದೇವೆ ಎನ್ನುತ್ತಾರೆ. ನ್ಯಾಯಾಲಯದ ಅನುಮತಿ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ರಾತ್ರಿ ಆಗಿದ್ದರಿಂದ ಆರೋಪಿತರು ತಪ್ಪಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ನ್ಯಾಯಾಲಯದ ಅನುಮತಿ ಪಡೆಯಲಿಲ್ಲ ಎನ್ನುತ್ತಾರೆ. ದಾಳಿ ಮಾಡುವ ಕಾಲಕ್ಕೆ ಸಮಯ ರಾತ್ರಿ 12-05 ಆಗಿತ್ತು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜನ 10-00 ಗಂಟೆಯ ನಂತರ ಮಲಗಿರುತ್ತಾರೆ ಎಂದರೆ ಸರಿ. ಮುರ್ಕವಾಡ ಸಣ್ಣ ಹಳ್ಳಿ ಎಂದರೆ ಸರಿ. ದಾಳಿ ಕಾಲದಲ್ಲಿ ಜಪ್ತುಪಡಿಸಿಕೊಂಡ ಹಣದ ಮುಖ ಬೆಲೆಯನ್ನು ಹೇಳಬಹುದೇ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಘಟನಾ ಜಾಗದ ಚಕ್ಕು ಬಂದಿ ಪೂರ್ವಕ್ಕೆ ನಂದಾ ಕೊರವೆಕರ ರವರ ಮನೆ, ಪಶ್ಚಿಮಕ್ಕೆ ಚಿದನಂದ ಹರಿಜನ ರವರ ಮನೆ, ಉತ್ತರಕ್ಕೆ ಹಳಿಯಳ-ಕಲಘಟಗಿ ರಸ್ತೆ, ದಕ್ಷಿಣಕ್ಕೆ ಅಂಬೇಡ್ಕರ ಗಲ್ಲಿಗೆ ಹೋಗುವ ರಸ್ತೆ ಬರುತ್ತದೆ ಎನ್ನುತ್ತಾರೆ. ನಾನು ದೂರು ನೀಡಲು ಬಂದಾಗ ಚಾಸಾ 11 ರವರು ಠಾಣಾಧಿಕಾರಿಯಾಗಿದ್ದರು. ನೀವು ಮತ್ತು ನಿಮ್ಮ ಸಿಬ್ಬಂದಿಗಳು ದಾಳಿ ಮಾಡುವ ಪೂರ್ವದಲ್ಲಿ ನಿಮ್ಮ ಅಂಗ ಶೋಧನೆ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಮಾಡಿಕೊಂಡಿದ್ದೇವೆ ಎನ್ನುತ್ತಾರೆ. ನಿಮ್ಮ ಬಳಿ ಇದ್ದ ಹಣವನ್ನು ಪಂಚನಾಮೆ ಅಥವಾ ದೂರಿನಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ಬಳಿ ಹಣ ಇರಲಿಲ್ಲ ಎನ್ನುತ್ತಾರೆ. ದಾಳಿ ಮಾಡುವಾಗ ನಾವು ಮತ್ತು ನಮ್ಮ ಸಿಬ್ಬಂದಿಗಳು ಸಮವಸ್ತ್ರದಲ್ಲಿ ಇದ್ದೇವು. ಪಂಚನಾಮೆಯ 2 ನೇ ಪಂಚರು ಯಾವ ಊರಿನವರು ಎಂದರೆ ಸಾಕ್ಷಿ ಮುರ್ಕವಾಡದಲ್ಲಿ ಅವರು ಇದ್ದರು. ನೀವು ಯಾವುದೇ ದಾಳಿ ಮಾಡಲ್ಲಿ, ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.